(ಜಿ) ದಿನಾಂಕ 21.4.91ರಲ್ಲಿ ಬೆಂಗಳೂರು ವಿಶೇಷ ಜಿಲ್ಲಾಧಿಕಾರಿ ಕಛೇರಿಯಲ್ಲಿ ರಜಾ ಕಾಲದಲ್ಲಿ ತಹಸೀಲ್ದಾರರಾಗಿ ಕೆಲಸ ಮಾಡುತ್ತಿದ್ದ ಶ್ರೀ ರಾಮೇಗೌಡರ ಕೊಲೆ ಪ್ರಕರಣದ ಬಗ್ಗೆ.

+ ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ಆರೋಪವಾಗಿದೆ. ಈ ವಿಷಯದ ಬಗ್ಗೆ ತಮ್ಮ ಹತ್ತಿರ ಬೆಳಿಗ್ಗೆ ಮಾತನಾಡಿದ್ದೇನೆ. ದಿನಾಂಕ: 21-4-91ರಲ್ಲಿ ಬೆಂಗಳೂರು ವಿಶೇಷ ಜಿಲ್ಲಾಧಿಕಾರಿ ಕಛೇರಿಯಲ್ಲಿ ರಜಾ ಕಾಲದಲ್ಲಿ ತಹಸೀಲ್ದಾರ್‌ರಾಗಿ ಕೆಲಸ ಮಾಡುತ್ತಿದ್ದ ಶ್ರೀ ರಾಮೇಗೌಡರ ಕೊಲೆಯಾಯಿತು. ಈ ಕೊಲೆ ಪ್ರಕರಣದ ಬಗ್ಗೆ ಅಲಸೂರು ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆಗಿದೆ. ಕೇಸ್ ಮೊದಲು 307 ಎಂದು ರಿಜಿಸ್ಟರ್ ಆಗಿ ಮತ್ತೆ ಸಾಕ್ಷಿಗಳ ಹೇಳಿಕೆ ಮತ್ತು ದೂರುಗಳಲ್ಲಿ ಇಂಥವರೇ ಕೊಲೆ ಮಾಡಿದ್ದಾರೆಂದು ಸ್ಪಷ್ಟವಾಗಿ ಪೊಲೀಸ್ ಸ್ಟೇಷನ್‌ನಲ್ಲಿ ಹೇಳಿದ್ದಾರೆ.

ಅಧ್ಯಕ್ಷರು :— ಮಾನ್ಯ ಸಿಂಧ್ಯಾರವರ ತಾಯಿಯವರು ಬಹಳ ತೀವ್ರವಾಗಿ ಅಸ್ವಸ್ಥರಾಗಿದ್ದಾರೆಂದು ಬೆಳಿಗ್ಗೆ ನನಗೆ ದೂರವಾಣಿ ಮೂಲಕ ತಿಳಿಸಿದರು. ತಾಯಿಗಿಂತ ಮಿಗಿಲಾದದ್ದು ಏನು ಇಲ್ಲ, ಅದ್ದರಿಂದ ನೀವು ಬರುವುದು ಬೇಡ ನಾನೇ ನೋಡಿಕೊಳ್ಳುತ್ತೇನೆಂದು ಮಾನ್ಯ ಸಚಿವರಿಗೆ ತಿಳಿಸಿದೆ. ಈ ವಿಷಯವನ್ನು ಇಲ್ಲಿ ಹೇಳುವುದು ಮರೆತು ಬಿಟ್ಟೆ. ಆದ್ದರಿಂದ ಮಾನ್ಯ ಸಚಿವರಿದ್ದಾಗ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಉತ್ತಮ. ಸುಮ್ಮನೆ ಕಾಟಾಚಾರಕ್ಕೆ ಈ ವಿಷಯಗಳನ್ನು ಇಲ್ಲಿ ತೆಗೆದುಕೊಳ್ಳುವುದು ಬೇಡ ನಾನು ಸಹ ಇದರ ಎಲ್ಲಾ ದಾಖಲೆಗಳನ್ನು ನೋಡಿದ್ದೇನೆ. I request you to raise it when Mr. Sindhya is present. Will you cooperate with me?

(ಅಂ) ರಾಜ್ಯದಲ್ಲಿ ಶೋಷಣೆಗೆ ಒಳಗಾದ ವರ್ಗದವರಿಗೆ ಬಿ.ಡಿ.ಎಯಿಂದ ಸೈಟುಗಳನ್ನು ಕೊಡುವ ಬಗ್ಗೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅನೇಕ ರೀತಿಯಲ್ಲಿ ಶೋಷಣೆಗೆ ಒಳಗಾದ ವರ್ಗದವರ ಬಗ್ಗೆ ನಾವು ಈ ಸದನದಲ್ಲಿ ಮಾತನಾಡಿದ್ದೇವೆ. ಶೋಷಣೆಯಲ್ಲಿ ಅನೇಕ ರೀತಿಯ ವಿಧಗಳಿವೆ. ಇವತ್ತು ಇನ್ನೊಂದು ರೀತಿಯಲ್ಲಿ ಶೋಷಣೆಗೆ ಒಳಗಾದವರ ಸಮಸ್ಯೆಯನ್ನು ಈ ಸದನದ ಮುಂದಿಡುತ್ತಿದ್ದೇನೆ. ಬೆಂಗಳೂರಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇದೆ. ಬಿ.ಡಿ.ಎ. ಕೆಲಸ ಕೇವಲ ಸೈಟುಗಳನ್ನು ಹಂಚುವುದು ಅಥವಾ ಮಾರುವುದಷ್ಟೇ ಅಲ್ಲ, ಸೈಟುಗಳನ್ನು ಹಂಚಿದ ಮೇಲೆ ಇವರ ಕೆಲಸ ಮುಗಿದು ಹೋಗುವುದಿಲ್ಲ; ಈ ವಿಷಯ ಮಾನ್ಯ ಸೋಮಣ್ಣನವರಿಗೂ ಗೊತ್ತಿರಬಹುದು. ಬಿ.ಡಿ.ಎ.ಯಿಂದ ಜಾಹೀರಾತು ಕೊಟ್ಟ ತಕ್ಷಣವೇ ಅರ್ಜಿಗಳನ್ನು ಹಾಕುತ್ತಾರೆ. ಭಾರತದ ಮೇಲೆ ಘಜ್ನಿ ಮಹಮದ್ ದಂಡಯಾತ್ರೆ ಮಾಡಿದ

ರೀತಿಯಲ್ಲಿ, ಸುಮಾರು 17 ರಿಂದ 18 ಸಲ ಅಟೆಮ್ಟ್ ಮಾಡಿದ ಮೇಲೆ ಸೈಟ್ ತೆಗೆದುಕೊಂಡು, ನಂತರ ಹಣ ಕಟ್ಟಿ ಸೈಟ್ ಸ್ಯಾಂಕ್ಷನ್ ಮಾಡಿಸಿಕೊಂಡರೂ ಸಹ ಸೈಟ್ ಹತ್ತಿರ ಆತ ಹೋಗುವುದಕ್ಕೆ ಆಗುವುದಿಲ್ಲ ಮತ್ತು ಸೈಟ್‌ನಲ್ಲಿ ಮನೆ ಕಟ್ಟುವುದಕ್ಕೂ ಸಹ ಆಗುತ್ತಿಲ್ಲ. ಜೊತೆಗೆ ಹರಾಜಿನಲ್ಲಿ ತೆಗೆದುಕೊಂಡವರು ಕೂಡ ಒಂದಕ್ಕೆ ಹತ್ತು ಪಟ್ಟು ಹೆಚ್ಚು ದುಡ್ಡು ಕೊಟ್ಟು ಸೈಟ್ ತೆಗೆದುಕೊಂಡು ಪ್ಲಾನ್ ಸ್ಯಾಂಕ್ಷನ್ ಮಾಡಿಸಿಕೊಂಡರೂ ಕೂಡ ಅಲ್ಲಿನ ಲೋಕಲ್ ಜನ ನಾವೇ ಈ ಲ್ಯಾಂಡ್ ಓನರ್‌ಗಳೆಂದು ಮತ್ತು ಇದರ ಜೊತೆಗೆ ಕೆಲವು ಲ್ಯಾಂಡ್ ಮಾಫಿಯಾಗಳು ಸೇರಿಕೊಂಡು ಅಲ್ಲಿ ಯಾರಿಗೂ ಮನೆ ಕಟ್ಟುವುದಕ್ಕೆ ಬಿಡುತ್ತಿಲ್ಲ. ಇವತ್ತಿನ ದಿವಸ ಬಿ.ಡಿ.ಎ.ರವರ ಬೇಜವಾಬ್ದಾರಿ ಎಲ್ಲಿಯವರೆಗೆ ಬಂದಿದೆ ಎಂದರೆ, ಸೈಟ್ ಅಲಾಟೀಸ್ ಮೇಲೆ ಕೇಸ್ ಹಾಕಿರುತ್ತಾರೆ, ಇದಕ್ಕೆ ಬಿ.ಡಿ.ಎ.ರವರು ಸಹ ಪಾರ್ಟಿಯಾಗಿರುತ್ತಾರೆ. ಆದರೆ, ಬಿ.ಡಿ.ಎ.ರವರು ಈ ಕೇಸ್‌ಗೆ ಹೋಗುವುದೇ ಇಲ್ಲ. ಒಂದು ಸಲ ಸೈಟ್‌ನ್ನು ಹಂಚಿದ ಮೇಲೆ ಈ ಅಲಾಟೀಸ್‌ಗಳ ಜವಾಬ್ದಾರಿ ನನ್ನದು ಎಂದು ಒಂದು ದೊಡ್ಡ ಮನಸ್ಸು ಕೂಡ ಬಿ.ಡಿ.ಎ.ರವರರಲ್ಲಿ ಇಲ್ಲ. ಈ ರೀತಿಯ ಒಂದು ಪ್ರಕರಣವನ್ನು ನಾನು ಈ ಸಭೆಯ ಮುಂದಿಡುತ್ತಿದ್ದೇನೆ. 1985ನೇ ಇಸವಿಯಲ್ಲಿ ಒಂದು ಸೈಟ್ ಅಲಾಟ್ ಆಗಿದೆ. 1986ನೇ ಇಸವಿಯಲ್ಲಿ ಟಿ.ಸಿ.ಯನ್ನು ಕೊಟ್ಟು, ಹಾಗೆಯೇ ಖಾತಾವನ್ನು ಕೂಡ ಮಾಡಿಕೊಟ್ಟಿದ್ದಾರೆ. ಆದರೆ, ಇಲ್ಲಿಯವರೆಗೆ ಆತ ಮನೆ ಕಟ್ಟುವುದಕ್ಕಾಗಿಲ್ಲ. ಮೊದಲೇ ಅಲ್ಲಿದ್ದಂಥ ಒಬ್ಬ ಲ್ಯಾಂಡ್ ಓನರ್ ಈತನ ಮೇಲೆ ಕೇಸ್ ಹಾಕಿದ್ದಾನೆ. ಈ ಕೇಸ್‌ಗೆ ಬಿ.ಡಿ.ಎ.ರವರನ್ನು ಸಹ ಪಾರ್ಟಿ ಮಾಡಿದ್ದಾರೆ. ದಕ್ಕೆ ಸಂಬಂಧಪಟ್ಟ ಜಡ್ಜ್ ಮೆಂಟ್‌ನಲ್ಲಿ ಏನು ಬರೆದಿದ್ದಾರೆಂದರೆ, ``B.D.A. remained aloof as a silent spectator''. ಎಂದು. ಬಿ.ಡಿ.ಎ.ರವರಿಗೆ ಇವರೂ ಸಹ ಡಿಫೆಂಡೆಂಟ್ ಆಗಿದ್ದಾರೆ. ಸೈಟ್ ಹಂಚಿಕೆಯಾಗಿರುವುದು ಮತ್ತು ಯಾವಗ ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಂಡು ಎಷ್ಟು ದುಡ್ಡು ಕಟ್ಟಿದ್ದಾರೆಂದು ಇವರಿಗೆ ಗೊತ್ತು. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಕನ್ನಡದಲ್ಲಿ ಒಂದು ಗಾದೆ ಇದೆ, ಏನೆಂದರೆ "ಒಪ್ಪಿದರೆ ಸರಿ, ಸರಿದರೆ ಒಪ್ಪು". ಈ ರೀತಿಯಾಗಿ ಇವತ್ತು ಇವರೇನಾದರೂ ಒಪ್ಪಿದರೆ ಬಿ.ಡಿ.ಎ.ರವರು ಸರಿದುಕೊಳ್ಳುತ್ತಾರೆ, ಅಲಾಟಿ ಸರಿದುಕೊಂಡಿದ್ದರೆ ಬಿ.ಡಿ.ಎ.ರವರು ಒತ್ತುತ್ತಾ ಇರುತ್ತಾರೆ. ಇದು ಎಲ್ಲಿಯವರೆಗೆ ನಡೆಯುತ್ತಾ ಹೋಗಬೇಕು? ಕಾನೂನು ಬದ್ಧವಾಗಿ ನಿಮ್ಮ ಜಾಹಿರಾತನ್ನು ಒಪ್ಪಿ ದುಡ್ಡು ಕೊಟ್ಟು ಸೈಟ್ ಅಲಾಟ್ ಮಾಡಿಸಿಕೊಂಡರು ಈ ಒಂದು ತ್ರಿಶಂಕು ಸ್ವರ್ಗದಲ್ಲಿ ಎಷ್ಟು ದಿವಸ ಇರಬೇಕು? ಇವರಿಗೆ ಬಿ.ಡಿ.ಎ.ರವರು ಯಾವ ರೀತಿ ರಕ್ಷಣೆ ಕೊಡುತ್ತೀರಿ?

ಶ್ರೀ ವಿ. ಸೋಮಣ್ಣ (ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದು ಸ್ವಾಯುತ್ತ ಸಂಸ್ಥೆ. ಈ ಸೈಟ್‌ಗಳನ್ನು ಕೂಡ ತಪ್ಪುಗಳದ್ದು ಅಥವಾ ಹಂಚಿಕೆ ಮಾಡತಪ್ಪುಗಳದ್ದು ಕೂಡತಪ್ಪುಗಳದ್ದು ಕೂಡ ಕೆಲವು ಜಾಹೀರಾತು ಮುಖೇನ ಜನರಿಗೆ ಅಧ್ಯತೆ ಮೇಲೆ ಕೊಡುವುದು

ಸಹಜವಾದ ವಿಷಯ, ಈಗ ಕೊಟ್ಟಿರತಕ್ಕಂಥ ಬಹುತೇಕ ಸ್ಟೇಟ್‌ಗಳಲ್ಲಿ ಸುಮಾರು 32 ರೀತಿಯಾದ ಪ್ರಾಜೆಕ್ಟ್‌ಗಳಲ್ಲಿ ಕೆಲವರು ಅಲ್ಲಿ ಮನೆಗಳನ್ನು ಕಟ್ಟಿರುತ್ತಾರೆ.ಇವರು ನೋಡದೇ ಇರತಕ್ಕಂಥ ಸಂದರ್ಭದಲ್ಲಿ ಸ್ಟೇಟ್‌ಗಳನ್ನು ಮಾಡುತ್ತಾರೆ. ಪ್ರಾಯೋಗಿಕವಾಗಿ ಸ್ಥಳದಲ್ಲಿರತಕ್ಕಂಥ ವಾಸ್ತುವಂಶವೇ ಬೇರೆ ಮತ್ತು ಪುಸ್ತಕದಲ್ಲಿರತಕ್ಕಂಥದ್ದೇ ಬೇರೆ. ನಾನು ಈ ಬೆಂಗಳೂರು ನಗರ ಅಭಿವೃದ್ಧಿ ಸಚಿವನಾದ ಮೇಲೆ, ಮೂರು ದಿವಸಗಳ ಕಾಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಕುಳಿತುಕೊಂಡು ಬೆಂಗಳೂರು ನಗರದ ಅನೇಕ ಬಡಾವಣೆಗಳನ್ನು ನೋಡಿದಾಗ ಕೆಲವು ಕಡೆ ಈ ರೀತಿ ಆಗಿರುವುದನ್ನು ಮನಗಂಡ ಮೇಲೆ ಸುಮಾರು 380 ಆಲ್ಟರ್‌ನೇಟೀವ್ ಸ್ಟೇಟ್‌ಗಳನ್ನು ನಾವು ಈಗಾಗಲೇ ವಿಲೇವಾರಿ ಮಾಡಿದ್ದೇವೆ. ಸುಮಾರು 18-20 ವರ್ಷಗಳಿಂದ ಈ ರೀತಿಯಾದ ಅವ್ಯವಸ್ಥೆ ನಡೆಯುತ್ತಾ ಬಂದಿದೆ. ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ ಗಾದೆ ಪ್ರಕಾರ, ಇದಕ್ಕೆ ಎಲ್ಲರೂ ಕೂಡ ಕಾರಣಕರ್ತರಾಗಿದ್ದಾರೆ. ಇವತ್ತು ಒಂದು ಕಡೆ ಸ್ಟೇಟ್‌ಗಳನ್ನು ತೆಗೆದುಕೊಂಡು ಟಿ.ಸಿ.ಯನ್ನು ಪಡೆದುಕೊಂಡ ನಂತರ ನಮ್ಮದು ಮತ್ತು ಅತನದು ಒಂದೇ ನಿಲುವಿರಬೇಕು. ಆ

1.50 ಪಿ.ಎಂ.

ಮನೆಯನ್ನು ಕಟ್ಟಿಕೊಂಡಿರತಕ್ಕವನು ಕೂಡ ಆ ಜಮೀನುದಾರನಿಗೆ ದುಡ್ಡು ಕೊಟ್ಟಿರುತ್ತಾನೆ. ಅವನು ಕೂಡ ಮುಂಡಲ ಪಂಚಾಯಿತಿಯಲ್ಲಿಯೋ ಟಿಎಂಸಿಯಲ್ಲಿಯೋ ನಗರಪಾಲಿಕೆಯಲ್ಲಿಯೋ ಖಾತೆಯನ್ನು ಮಾಡಿಸಿಕೊಂಡಿರುತ್ತಾನೆ. ಈ ರೀತಿಯಾದ ಗೊಂದಲವಾಗಬಾರದು ಎನ್ನುವ ತೀರ್ಮಾನವನ್ನು ನಾನು ಮಾಡಿ ಈ ರೀತಿಯಾಗಿರತಕ್ಕಂಥ ಕೇಸ್‌ಗಳು, ಅನುಭವಿಸತಕ್ಕಂಥದ್ದಕ್ಕೆ ಜೆ.ಸಿ.ಯನ್ನು ತೆಗೆದುಕೊಂಡು ಖಾತೆ ಕಂದಾಯವನ್ನು ಮಾಡಿಸಿಕೊಂಡು ಪ್ಲಾನ್ ಮಂಜೂರು ಮಾಡಿಸಿಕೊಂಡು ಅಲ್ಲಿ ಹೋಗಿ ಮನೆಯನ್ನು ಕಟ್ಟಿಕೊಳ್ಳಲು ಎಷ್ಟು ಜನರಿಗೆ ಸಾಧ್ಯವಿಲ್ಲವಾಗಿದೆ ಎನ್ನುವ ಮಾಹಿತಿಯನ್ನು ಈಗಾಗಲೇ ನಾನು ಸಂಗ್ರಹ ಮಾಡಿಕೊಂಡಿದ್ದೇನೆ. ಅದರಲ್ಲಿ ಸುಮಾರು 1300 ಕ್ಕೂ ಹೆಚ್ಚಿನ ಈ ರೀತಿಯಾದಂಥ ಪ್ರಕರಣಗಳು ಇರುವ ಬಗ್ಗೆ ಬಿಡಿಎದವರು ನಮಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ. ಹೀಗೆ ಕೊಟ್ಟಿರತಕ್ಕಂಥ ಮಾಹಿತಿಯಲ್ಲಿ ಅದರಲ್ಲಿ ಸುಮಾರು 700 ಕೇಸ್‌ಗಳನ್ನು ಬಗೆಹರಿಸಿ ಅವರಿಗೆ ಬೇರೆ ಸ್ಟೇಟ್‌ನ್ನು ಕೊಟ್ಟಿರುವ ಉದಾಹರಣೆ ಇದೆ. ನಾವು ಇಲ್ಲಿ ಕೊಟ್ಟ ತಕ್ಷಣ, ಬೇರೆ ಇನ್ನೊಂದು ರೆಕಾರ್ಡ್ ತೆಗೆದುಕೊಂಡು ಹೋಗಿ ಕೋರ್ಟಿನಿಂದ ರಕ್ಷಣೆ ಪಡೆಯುತ್ತಾರೆ. ಒಂದು ಸಲ ರಕ್ಷಣೆ ಪಡೆದ ಮೇಲೆ ಅಲ್ಲಿ ನೂರಾರು ಮನೆಗಳನ್ನು ಕಟ್ಟಿರುತ್ತಾರೆ, 10, 20, 30, 40, ವರ್ಷಗಳಿಂದ ಇಂತಹ ಸ್ಟೇಟ್‌ಗಳನ್ನು ಪಡೆದಿರುತ್ತಾನೆ, ಅವನು ಟಿ.ಸಿ. ತೆಗೆದುಕೊಂಡಿರುತ್ತಾನೆ, ಅಲ್ಲಿ ಬೇರೆ ಇನ್ನೊಬ್ಬ ಇರುತ್ತಾನೆ, ಆಗ ಅವನು ಇವನು ಕೂಡಿಕೊಂಡು ಘರ್ಷಣೆ ಮಾಡುತ್ತಾರೆ, ಇದು ಸಹಜವಾಗಿ ನಡೆಯುತ್ತದೆ. ತೊಂದರೆಯನ್ನು ತಪ್ಪಿಸಬೇಕೆನ್ನುವ ತೀರ್ಮಾನವನ್ನು ಮಾಡಿ ಸಾವಿರಕ್ಕೂ ಮೇಲ್ಪಟ್ಟು ತೊಂದರೆಯಲ್ಲಿರತಕ್ಕಂಥವರನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಇವರೆಲ್ಲರಿಗೂ ಕೂಡ

ಈ ತಿಂಗಳಲ್ಲಿಯೇ ಎಷ್ಟು ಸಾಧ್ಯ ಇದೆಯೋ..... ನಾನು 7ನೇ ತಾರೀಖು ಸಂಜೆ 3 ಗಂಟೆಯಿಂದ ಕುಳಿತುಕೊಂಡು ಅಲ್ಲಿಗೆ ಬರತಕ್ಕಂಥ ಪ್ರತಿಯೊಬ್ಬರಿಗೂ ಕೂಡ ಯಾವ ಯಾವ ನಂಬರ್‌ಗಳು ಇವೆ ಆಯಾಯಾ ನಂಬರ್‌ಗಳಿಗೆ ಅವರನ್ನು ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು :— ಮಾನ್ಯ ಸೋಮಣ್ಣನವರೆ, ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ ಹಿನ್ನಲೆ ಏನು ಎಂಬುದು ಗೊತ್ತು. ನಂದಿನಿ ಲೇ-ಔಟ್‌ನಲ್ಲಿ ಯಾವುದೋ ಒಂದು ಗ್ರೂಪ್ ಇದೆಯಂತೆ....

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೆ, ಈ ನಂದಿನಿ ಲೇ-ಔಟ್ ಬಗ್ಗೆ ನಾನು ಹೇಳುತ್ತೇನೆ. ಸುಪ್ರೀಂ ಕೋರ್ಟ್‌ನಿಂದ ಕೂಡ ಅಲ್ಲಿ ತೆರವು ಮಾಡಿಸಬೇಕೆಂದು ಆದೇಶ ಬಂತು. ಮಾನವೀಯತೆಯ ದೃಷ್ಟಿಯಿಂದ ಅಲ್ಲಿರುವ ಆ ಇಬ್ಬರು ಕಳೆದ ಹತ್ತಾರು ವರ್ಷಗಳಿಂದ ವಾಸವನ್ನು ಮಾಡಿಕೊಂಡು ಇರುವುದರಿಂದ ಮತ್ತು ಅಲ್ಲಿ ಇನ್ನೂ ಯಾರ್ಯಾರೂ ಇದ್ದಾರೆ ಅವರಿಗೆ ಆಲ್ಟರ್‌ನೇಟಿವ್‌ಆಗಿ ಸೈಟ್ ಕೊಟ್ಟು, ಆ ಕಾರ್ಯ ಮಾಡಬೇಕಾಗಿದೆ. ನಂದಿನಿ ಲೇ-ಔಟ್‌ನಲ್ಲಿ ನನಗೆ ಬಂದಿರುವ ಮಾಹಿತಿ ಪ್ರಕಾರ ಸುಮಾರು 70-80 ಜನರಿಗೆ ನಾವು ಆಲ್ಟರ್‌ನೇಟೀವ್ ಆಗಿ ಬೇರೆ ಸೈಟ್‌ನ್ನು ಕೊಡಬೇಕಾಗಿದೆ. ಅಲ್ಲಿದ್ದವರನ್ನು ತೆರವು ಮಾಡಿಸಲು ನಮಗೆ ಸ್ವಲ್ಪ ಕಠಿಣವಾಗಿರುವುದರಿಂದ, ಈ 70-80 ಜನರಿಗೆ ಯಾರಿಗೆ ಸೈಟ್ ಮಂಜೂರು ಆಗಿದೆ, ಯಾರಿಗೆ, ಖಾತೆ ಮಾಡಿದ್ದಾರೆ, ಕಂದಾಯ ಕೂಡ ಅವರೆ ಕಟ್ಟುತ್ತಿದ್ದಾರೆ, ಆದರೆ ಅಲ್ಲಿ ಬೇರೆಯವರು ಬಂದು ವಾಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು :— ಮಾನ್ಯ ಸೋಮಣ್ಣನವರೆ, ಅವರು ಹೇಳುವಾಗ ಅರ್ಧಕ್ಕೆ ನಿಲ್ಲಿಸಿದರು. ಇದು ಒಂದು ರೀತಿಯಾದ ಸಮಸ್ಯೆ, ಅಲ್ಲಿ ಯಾರದೋ ಒಂದು ಗ್ರೂಪ್ ಇದೆಯಂತೆ, ಅದೇ ಒಂದು ತರಹ ಪ್ಯಾರಲಲ್ ಬಿಡಿಎ ಇದ್ದ ಹಾಗೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೆ, ಆ ತರಹ ಯಾವ ಗ್ರೂಪ್ ಇದೆಯೋ ಅದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಚಿವರೆ, ನಮಗೆ 1983ನೇ ಇಸ್ವಿಯಿಂದ ನಂದಿನಿ ಲೇ-ಔಟ್ ಬಗ್ಗೆ ಗೊತ್ತಿದೆ. ಅಲ್ಲಿ ಒಂದು ದೊಡ್ಡ ಮಾಫಿಯಾ ಗ್ರೂಪ್ ಇದೆ; ಅವರು ಈ ಸೈಟ್ ಯಾರಿಗೆ ಹಂಚಿಕೆ ಆಗಿರುತ್ತದೆ ಅವರಿಗೆ ನ್ಯಾಯಯುತವಾಗಿ ಮನೆ ಕಟ್ಟಿಕೊಳ್ಳುವುದಕ್ಕೆ ಬಿಡುತ್ತಿಲ್ಲ. ಬಿಡಿಎ ಆಕ್ಟ್ ಪ್ರಕಾರ, ಅಲಾಟ್ ಆದ ನಂತರ ಮೂರು ವರ್ಷಗಳಲ್ಲಿ ಕಟ್ಟಡವನ್ನು ಕಟ್ಟದಿದ್ದರೆ ದಂಡವನ್ನು ವಿಧಿಸುತ್ತೀರಿ. 15 ವರ್ಷವಾದರೂ ಮನೆ ಕಟ್ಟುವುದಕ್ಕೆ ಅನಾನುಕೂಲವಾಗಿರುವುದರಿಂದ ಬಿಡಿಎಗೆ ಏನು ದಂಡ ವಿಧಿಸಬೇಕು? ಬಿಡಿಎದವರು ತಮ್ಮ ಸೆನ್ಸ್ ಆಫ್ ರೆಸ್ಪಾನ್ಸಿಬಿಲಿಟಿ ಅರ್ಥ ಮಾಡಿಕೊಂಡು ಇವರಿಗೆ

ಸೈಟ್‌ನ್ನು ಕೊಡಿಸಿಕೊಡಬೇಕು, ಇಲ್ಲವಾದರೆ ಈ ಲ್ಯಾಂಡ್ ಮಾಫಿಯಾ ಜೊತೆಗೆ ಯುದ್ಧವನ್ನು ಮಾಡಬೇಕು. ಅವರು ಎಷ್ಟು ದಿವಸಗಳವರೆಗೆ ಈ ತ್ರಿಶಂಕು ಸ್ಥಿತಿಯಲ್ಲಿ ಇರುವುದಕ್ಕೆ ಬಿಡುತ್ತೀರಿ?

ಅಧ್ಯಕ್ಷರು :— ಆ ಗ್ರೂಪ್ ಏನಿದೆ ಅದರಲ್ಲಿರುವ 8-10 ಜನರು, ಅವರಿಗೆ ಸಂಬಂಧ ಇರಲಿ ಅಥವಾ ಇಲ್ಲದೇ ಇರಲಿ ಆ ಸೈಟ್ ಹತ್ತಿರ ಹೋಗಿ ಬಿಡುತ್ತಾರಂತೆ, ಗಲಾಟೆ ಮಾಡಿ ದುಡ್ಡು ಕೊಡಿ ಎಂದು ಕೇಳುತ್ತಾರೆ. ಅವರಿಗೆ 10 ರಿಂದ 15 ಸಾವಿರ ರೂಪಾಯಿಗಳವರೆಗೆ ಕೊಡಬೇಕು. ಅವರಿಗೆ ಹಣ ಕೊಟ್ಟರೆ ಮನೆ ಕಟ್ಟಿಕೊಳ್ಳಬಹುದು, ಇಲ್ಲದಿದ್ದರೆ ಇಲ್ಲ, ಅವನೇ ಬಿಡಿಎ ಎಂದು ಹೇಳಿಕೊಳ್ಳುತ್ತಾನಂತೆ. ಇಲ್ಲಿ ಬಿಡಿಎ ಅಧ್ಯಕ್ಷರು ಮಾನ್ಯ ಶಿವರಾಮೇಗೌಡರಿದ್ದಾರೆ, ಅವರು ಆ ರೀತಿ ಬರುವುದಿಲ್ಲ ಎಂದಿದ್ದಕ್ಕೆ, ನಾನೇ ಎಂದು ಹೇಳುತ್ತಾನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಬಿಡಿಎ ಅಧ್ಯಕ್ಷರು ನಮಗೆ ಗೊತ್ತು ಎಂದು ನಾವು ಹೇಳಿದರೆ, ಅವರು ಏನು ಹೇಳುತ್ತಾರೆಂದರೆ, ಬಿಡಿಎ ಅಧ್ಯಕ್ಷರು ನಮ್ಮ ಜೇಬಿನಲ್ಲಿದ್ದಾರೆನ್ನುತ್ತಾರೆ. ಅಂದರೆ ಮಾನ್ಯ ಶಿವರಾಮೇಗೌಡರು ನಮ್ಮ ಜೇಬಿನಲ್ಲಿದಾರೆಂದು ಹೇಳುತ್ತಾರೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೆ, ಈ ಮಾಫಿಯಾಗಳ ಬಗ್ಗೆ ನನಗೆ ಅನುಭವ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸೋಮಣ್ಣನವರೆ, ನನಗೂ ಆ ಮಾಫಿಯಾಗಳ ಬಗ್ಗೆ ಅನುಭವ ಇಲ್ಲ. ಆದರೂ ಮಾನ್ಯ ಸಚಿವರಾದ ತಾವು ಆ ಬಗ್ಗೆ ಮಾಹಿತಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಎನ್. ರಾಜೇಂದ್ರನ್ :— ಮಾನ್ಯ ಮಂತ್ರಿಗಳಿಗೆ ಮಾಫಿಯಾಗಳ ಬಗ್ಗೆ ಅನುಭವ ಇಲ್ಲವೆಂದರೆ, ಮಾನ್ಯ ಸುರೇಶ್ ಕುಮಾರ್‌ರವರಿಗೆ ಅದು ಗೊತ್ತಿದೆಯಾ? ಮಾನ್ಯ ಸಚಿವರಿಗೆ ಆ ಅನುಭವ ಇಲ್ಲವೆಂದ ಮಾತಿಗೆ ಹೇಳಿದೆ.

ಅಧ್ಯಕ್ಷರು :— ಮಾಫಿಯಾಗಳು ಇದ್ದರು ಸಿಟಿಯಲ್ಲಿ ಮಾತ್ರ ಇರುತ್ತಾರೆ, ಅವರು ಹಳ್ಳಿಯಲ್ಲಿ ಇರುವುದಿಲ್ಲ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೆ, ಅಲ್ಲಿ ಮಾಫಿಯಾ ಗ್ರೂಪ್ ಇದೆ ಅಂದ ಮಾತ್ರಕ್ಕೆ ನಾನು ಗಾದೆ ಹೇಳಿದೆ; ಈ ಸಂಧರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ನಾನು ದಿನಾಂಕ: 7-7-99ರ ಸಂಜೆ 3 ಗಂಟೆಯಿಂದ ನಂದಿನಿ ಲೇ-ಔಟ್‌ನಲ್ಲಿ ರಿವ್ಯೂ ಮಾಡುತ್ತೇನೆ. ಎಷ್ಟು ಜನರಿಗೆ ಈ

ರೀತಿಯಾಗಿ ಈ ಪಟ್ಟಬದ್ದ ಹಿತಾಸಕ್ತಿಗಳು ಕಿರುಕುಳವನ್ನು ಕೊಡುತ್ತಿದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಟಾಸ್ಕ್-ಫೋರ್ಸ್ ಇದೆ, ಇವತ್ತು ಸಂಜೆ 5 ಗಂಟೆಗೆ ಅವರನ್ನು ಕರೆದು ಆದೇಶ ಮಾಡಿ ಸೂಚನೆಯನ್ನು ಕೊಡುತ್ತೇನೆ, ತಕ್ಷಣ ಅಂತಹವರು ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆಂದು ತಮ್ಮ ಮೂಲಕ ಈ ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಆಲ್ಲಿ ಯಾರನ್ನಾದರೂ ಹೊಡಿದಾಗ ನಾವು ಮುಂದಾಗಿ ಹೋಗಿ ನಿಂತುಕೊಳ್ಳುತ್ತೇವೆ; ಇಂತಹ ಒಂದು ಕ್ರಮ ತೆಗೆದುಕೊಳ್ಳುವಾಗ ಚುನಾಯಿತ ಪ್ರತಿನಿಧಿಗಳಿಂದ, ಯಾವುದೇ ಪಕ್ಷದವರಿಂದ ಆಕ್ಷೇಪ ಬರಬಾರದು. ಇವತ್ತೇ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ನನ್ನ ಹೆಸರನ್ನು ಹೇಳಿಕೊಂಡು, ಮಾನ್ಯ ಬಿಡಿಎ ಚೇರ್‌ಮನ್‌ರ ಹೆಸರನ್ನು ಹೇಳಿಕೊಂಡರು; ಅವರ ಮೇಲೆ ನಾನು ಕಾನೂನು ಕ್ರಮ ಕೈಗೊಂಡು ಶಿಕ್ಷೆ ಕೊಡುವುದಕ್ಕೆ ಮುಂದಾಗಿದ್ದೇವೆ.

(ಅ) ಚಾಮರಾಜನಗರ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ ಕಾರ್ಯದ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್ ನಗರ) :— ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಹೋಗಿ ಸುಮಾರು ಮೂರು ತಿಂಗಳಾಗಿದೆ. ಕಳುಹಿಸಿಕೊಡುವಂತೆ ನಾವು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು :— ಮಾನ್ಯ ಖಿರ್ಗೆಯವರು ತಕರಾರು ಮಾಡುತ್ತಿದ್ದಾರೆ; ಮಾನ್ಯ ವಾಟಾಳ್ ನಾಗರಾಜ್‌ರವರು ನನಗಿಂತ ಹಿರಿಯ ಸದಸ್ಯರು, ಮೊದಲು ನನಗೆ ಅವಕಾಶ ಕೊಟ್ಟು ನಂತರ ಅವರಿಗೆ ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ನನಗೆ ಕೇಳಿದರೂ ಕೂಡ ನಾನು ಆ ಕಡೆ ಗಮನ ಕೊಡುತ್ತಿಲ್ಲ, ಏಕೆಂದರೆ, ಅವರ ಕಿತಾಪತಿ ನನಗೆ ಗೊತ್ತು, ನೀವು ಇಬ್ಬರು ಮಾತಾಡುವುದು ನನಗೆ ಕೇಳಿಸುತ್ತಿದ್ದರೂ ನಾನು ನೇರವಾಗಿ ಮಂತ್ರಿಗಳ ಗಮನ ಸೆಳೆಯುವ ಕಡೆ ಹೋಗುತ್ತಿದ್ದೇನೆ. ಅವರು ಮಾತನಾಡಲು ಅಡ್ಡಿಪಡಿಸುತ್ತಾರೆಂದು ನಾನು ಆ ಕಡೆ ಲಕ್ಷವನ್ನು ಕೊಟ್ಟಿಲ್ಲ. ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಮೂರು ತಿಂಗಳಾಗಿರುವುದರಿಂದ ನಾನು ಹಿಂದೆ ಒಂದು ಸಲ ತಮಗೆ ಹೇಳಿದೆ, ಸಭೆಯನ್ನು ಕರೆಯಬೇಕು ಎಂದು. ಇಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಹೋಗುತ್ತಿಲ್ಲ, ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನನ್ನ ಕ್ಷೇತ್ರದ ಹರಪನಹಳ್ಳಿ ಎನ್ನುವ ಒಂದು ಹೋಬಳಿಯಲ್ಲಿ ಸುಮಾರು 5 ಸಾವಿರ ಎಕರೆ ಜಮೀನು ಅವಶ್ಯಕತೆಯಿಂದ ಸಂಪೂರ್ಣವಾಗಿ ನೀರಾವರಿ ನಿಂತು ಹೋಗಿದೆ. ಒಂದೂವರೇ ಎರಡು ತಿಂಗಳಿಂದ ನಿಂತು ಹೋಗಿದೆ. ತಾವು ಕೂಡಲೇ ಟ್ರಾನ್ಸ್‌ಫಾರ್ಮರ್ ತರಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ? ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ನೀಡಿ ಇವತ್ತೇ ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.